ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 : ದಿನಾಂಕ : 11–08–2018

# ವಿಶೇಷ ಪತ್ರಿಕಾ ಆಮಂತ್ರಣ

**72 ನೇ ಸ್ವಾತಂತ್ರ್ಯ ದಿನಾಚರಣೆಯ ರಾಜ್ಯಮಟ್ಟದ ಸಮಾರಂಭದ ಪೂರ್ವಸಿದ್ದತಾ ಪತ್ರಿಕಾಗೋಷ್ಠಿ**
**ದಿನಾಂಕ: 13–08–2018, ಸೋಮವಾರ, ಬೆಳಿಗ್ಗೆ : 9–00 ಗಂಟೆಗೆ**
**ಸ್ಥಳ: ಮಾಣಿಕ್ ಷಾ ಪೆರೇಡ್ ಮೈದಾನ, ರಾಜಭವನ ರಸ್ತೆ, ಬೆಂಗಳೂರು**

ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುವವರು:

1. ಶ್ರೀ ಎನ್. ಮಂಜುನಾಥ್ ಪ್ರಸಾದ್, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
2. ಶ್ರೀ ಟಿ. ಸುನೀಲ್‌ಕುಮಾರ್, ಆಯುಕ್ತರು, ಬೆಂಗಳೂರು ನಗರ ಪೊಲೀಸ್
3. ಶ್ರೀ ಬಿ.ಎಂ. ವಿಜಯಶಂಕರ್, ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ

ಡಿ. ಪಿ. ಮುರಳೀಧರ್
ಉಪ ನಿರ್ದೇಶಕರು

# ಮಾಧ್ಯಮದವರ ಗಮನಕ್ಕೆ

72 ನೇ ಸ್ವಾತಂತ್ರ್ಯ ದಿನಾಚರಣೆಯ ರಾಜ್ಯಮಟ್ಟದ ಸಮಾರಂಭದ ವರದಿಗಾಗಿ ಮಾಧ್ಯಮದವರಿಗೆ ಆಮಂತ್ರಣ ಪತ್ರಿಕೆಗಳನ್ನು ನಗರದ ಭಗವಾನ್ ಮಹಾವೀರ ರಸ್ತೆಯಲ್ಲಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸೌಧದ ಎರಡನೇ ಮಹಡಿಯಲ್ಲಿರುವ ಬೆಂಗಳೂರು ನಗರ ಜಿಲ್ಲೆಯ ಉಪ ನಿರ್ದೇಶಕರ ಕಚೇರಿಯಲ್ಲಿ ಆಗಸ್ಟ್ 13 ರಂದು ಸೋಮವಾರ ಬೆಳಿಗ್ಗೆ 11–30 ಗಂಟೆಯಿಂದ ಸಂಜೆ 5–00 ಗಂಟೆಯವರೆಗೆ ವಿತರಿಸಲಾಗುವುದು.

# <u>ಪತ್ರಿಕಾ ಪ್ರಕಟಣೆ</u>

## <u>ಬಿ.ಫಾರ್ಮ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಸಂದರ್ಶನಕ್ಕೆ ಆಹ್ವಾನ</u>

**ಬೆಂಗಳೂರು, ಆಗಸ್ಟ್ 11, (ಕರ್ನಾಟಕ ವಾರ್ತೆ) ಉಳಿಕೆಯಾಗಿರುವ ಪ್ರಥಮ ಬಿ.ಫಾರ್ಮ, 2 ನೇ ವರ್ಷದ ಬಿ.ಫಾರ್ಮ ಲ್ಯಾಟರಲ್ ಎಂಟ್ರಿ, ಎಂ. ಫಾರ್ಮ ಕೋರ್ಸ್‌ಗಳ ಪ್ರವೇಶಕ್ಕಾಗಿ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯವು ದಿನಾಂಕ 14–8–2018 ರಂದು ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಸುಬ್ಬಯ್ಯ ವೃತ್ತ, ಬೆಂಗಳೂರು–27 ಇಲ್ಲಿ ಸಂದರ್ಶನವನ್ನು ಏರ್ಪಡಿಸಿದೆ. ಅರ್ಹ ವಿದ್ಯಾರ್ಥಿಗಳು ಅಂದು ಸಿ.ಇ.ಟಿ/ಪಿ.ಜಿ.ಇ.ಟಿ ರ್‍ಯಾಂಕ್ ಪ್ರಮಾಣ ಪತ್ರದೊಂದಿಗೆ ನೊಂದಣಿ ಸಮಿತಿಯ ಮುಂದೆ ಸಂದರ್ಶನಕ್ಕೆ ಹಾಜರಾಗಬಹುದು. ಆಯ್ಕೆಯಾದ ವಿದ್ಯಾರ್ಥಿಗಳು ಅದೇ ದಿನಾಂಕದಂದು ಪ್ರವೇಶವನ್ನು ಪಡೆಯತಕ್ಕದ್ದು, ಪ್ರಥಮ ಬಿ.ಫಾರ್ಮ/ 2ನೇ ವರ್ಷದ ಬಿ ಫಾರ್ಮ ಲ್ಯಾಟರಲ್ ಎಂಟ್ರಿ ಪ್ರವೇಶ ಶುಲ್ಕ ರೂ 14,470/– ಮತ್ತು ಎಂ.ಫಾರ್ಮ ಪ್ರವೇಶ ಶುಲ್ಕ ರೂ 22,300/– ಆಗಿರುತ್ತದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 080–22222681 ಅನ್ನು ಸಂಪರ್ಕಿಸಬಹುದು.**